# ಜಯ ಮಂಗಳಂ - ಸಚ್ಚಿದಾನಂದ

**Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi

ರಾಗ: ಭೈರವಿ　　　　　　　　ತಾಳ: ಛಾಪು

ಜಯ ಮಂಗಳಂ ನಿತ್ಯ ಶುಭ ಮಂಗಳಂ　|| ಪ ||

ಸಚ್ಚಿದಾನಂದ ಸರ್ವ ಗುಣ ಪೂರ್ಣಗೆ
ಅತ್ಯಂತ ಸುಜ್ಞಾನ ಗಭ್ಯಾಕ್ಷಗೆ
ಮೆಚ್ಚಿ ಗೋಪಿಯರೊಡನೆ ಮನವಿಟ್ಟು ಕೂಡಿದಗೆ
ನಿತ್ಯ ಕಲ್ಯಾಣ ನಿರ್ದೋಷಗೆ　|| 1 ||

ವ್ಯಾಸಾವತಾರಗೆ ವೇದ ಉದ್ಧಾರಗೆ
ಸಾಸಿರ ನಾಮದಾ ಸರ್ವೇಶಗೆ
ವಾಸವಾಗಿದ್ದ ಶ್ರೀ ವೈಕುಂಠ ನಿಲಯಗೆ
ಶೇಷಗಿರಿವಾಸ ವೆಂಕಟ ರಾಯಗೆ　|| 2 ||

ಅಂಬರೀಷನ ಶಾಪ ಪರಿಹರಿಸಿದವಗೆ
ತುಂಬುರು ನಾರದ ಮುನಿ ವಂದ್ಯಗೆ
ಅಂಬುಜನಾಭಗೆ ಅಜನ ಪೆತ್ತವನಿಗೆ
ಕಂಬುಕಂಧರ ಪುರಂದರ ವಿಠಲ ರಾಯಗೆ　|| 3 ||

**Classification:** Keerthane
**Ankita:** purandara vittala
**Location:** NA
**Category:** Mangala Song, Vishnu Stuti
**Sub-Category:** Vishnu, mangala, guna, purna, jnana, gopi, mana, vyasa, veda, vaikunta, srinivasa, ambarisha, shapa, narada, muni, Krishna,
**Pravachana:** NA
**Explanation:** NA